ಅ) 4637

ಇ) 502 ಅರಣ್ಯ ರಕ್ಷಕರ ಹುದ್ದೆಗಳು ಖಾಲಿ ಇರುವುದರಿಂದ ಸುಮಾರು 200 ಅರಣ್ಯ ರಕ್ಷಕರ ಕೊರತೆ ಇರುತ್ತದೆ.

ಈ) 1988 ನೇ ಸಾಲಿನಿಂದ ಮಿತವ್ಯಯ ಆದೇಶ ಜಾರಿಯಲ್ಲಿರುವುದರಿಂದ ಇಲಾಖೆಯು ಖಾಲಿ ಹುದ್ದೆಗಳನ್ನು ನೇರ ನೇಮಕಾತಿಯಿಂದ ತುಂಬಲು ಕ್ರಮ ತೆಗೆದುಕೊಂಡಿರುವುದಿಲ್ಲ. 223 ಹುದ್ದೆಗಳನ್ನು ತುಂಬುವ ಪ್ರಸ್ತಾವವು ಸರ್ಕಾರದ ಪರಿಶೀಲನೆಯಲ್ಲಿದೆ. ಅಲ್ಲದೆ ಹುದ್ದೆಗಳನ್ನು ಬಡ್ತಿಯಿಂದ ಹಾಗೂ ಅನುಕಂಪದನ್ನಯ ನೇಮಕಾತಿಯಿಂದ ತುಂಬಲಾಗುತ್ತಿದೆ.

ರಾಜ್ಯಕ್ಕೆ ಅಗತ್ಯವಿರುವ ತಹಶೀಲ್ದಾರರ ಹುದ್ದೆಗಳು

577 (812) ಶ್ರೀ ಆರ್. ವಿ. ದೇಶಪಾಂಡೆ (ಹಳಿಯಾಳ):- ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯಕ್ಕೆ ಅಗತ್ಯವಿರುವ ತಹಶೀಲ್ದಾರರ ಹುದ್ದೆಯ ಸಂಖ್ಯೆ ಎಷ್ಟು?

ಆ) ಈ ಪೈಕಿ ಈಗ ಮಂಜೂರು ಮಾಡಿರುವ ಹುದ್ದೆಗಳೆಷ್ಟು?

ಇ) ಎಷ್ಟು ತಹಶೀಲ್ದಾರರ ಹುದ್ದೆಗಳು ಕೊರತೆ ಇವೆ.

ಈ) ಇವುಗಳನ್ನು ಭರ್ತಿ ಮಾಡಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಕಂದಾಯ ಮಂತ್ರಿಗಳು):-

ಅ) 406 (ನಿಯೋಜನೆ ಮತ್ತು ರಜಾಮೀಸಲಾತಿ ತಹಶೀಲ್ದಾರರ ಹುದ್ದೆಗಳನ್ನು ಒಳಗೊಂಡಂತೆ)

ಆ) -ಅದೇ-

ಇ) -ಇಲ್ಲ-

ಈ) 54 ಖಾಲಿ ಹುದ್ದೆಗಳನ್ನು ಬಡ್ತಿಯ ಮೂಲಕ ತುಂಬಲು ಕ್ರಮ ತೆಗೆದುಕೊಳ್ಳಲಾಗುತ್ತಿದೆ.

ಅಗತ್ಯವಿರುವ ಸಬ್ ರಿಜಿಸ್ಟ್ರಾರ್ ಹುದ್ದೆಗಳ ಸಂಖ್ಯೆ

579 (815) ಶ್ರೀ ಗುರುಪಾದಪ್ಪ ನಾಗ್ಮಾರಪಲ್ಲಿ (ಬೀದರ್):- ಮಾನ್ಯ ಕಂದಾಯ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯಕ್ಕೆ ಅಗತ್ಯವಿರುವ ಸಬ್-ರಿಜಿಸ್ಟ್ರಾರ್‌ಗಳ ಹುದ್ದೆಗಳೆಷ್ಟು?

ಆ) ಇದರಲ್ಲಿ ಈಗ ಮಂಜೂರಾಗಿರುವ ಸಬ್-ರಿಜಿಸ್ಟ್ರಾರ್‌ಗಳ ಸಂಖ್ಯೆ ಎಷ್ಟು?

ಇ) ಎಷ್ಟು ರಿಜಿಸ್ಟ್ರಾರ್ ಹುದ್ದೆಗಳು ಖಾಲಿ ಇವೆ?

ಈ) ಇವುಗಳನ್ನು ತುಂಬಲು ಸರ್ಕಾರ ಕೈ ಗೊಂಡಿರುವ ಕ್ರಮಗಳೇನು?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಕಂದಾಯ ಸಚಿವರು):-

ಅ) 233

ಆ) 228

ಇ) 13 (ಉಪ-ನೋಂದಣಾಧಿಕಾರಿಗಳು)

ಈ) ವ್ಯಂದ ಮತ್ತು ನೇಮಕಾತಿ ನಿಯಮಾನುಸಾರ ಈ ಹುದ್ದೆಗಳನ್ನು ತುಂಬಲು ಕೂಡಲೆ ಕ್ರಮ ಕೈಗೊಳ್ಳಲಾಗುವುದು.

ಬೀದರ್ ಜಿಲ್ಲೆಯಲ್ಲಿ ತೋಟಗಾರಿಕೆ ಅಭಿವೃದ್ಧಿಗೆ ಕ್ರಮ

580 (816) ಶ್ರೀ ಗುರುಪಾದಪ್ಪ ನಾಗಾರ್ಮರಪಲ್ಲಿ (ಔರಾದ್ ಕ್ಷೇತ್ರ):- ಮಾನ್ಯ ತೋಟಗಾರಿಕೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೀದರ್ ಜಿಲ್ಲೆಯಲ್ಲಿ ತೋಟಗಾರಿಕೆಯನ್ನು ಅಭಿವೃದ್ಧಿ ಪಡಿಸಲು ಕೈಗೊಂಡಿರುವ ಕ್ರಮಗಳೇನು?

ಆ) ಇದಕ್ಕಾಗಿ ಎಷ್ಟು ಹಣವನ್ನು ಖರ್ಚು ಮಾಡಲಾಗುತ್ತಿದೆ?

ಇ) ಬೀದರ್ ಜಿಲ್ಲೆಯಲ್ಲಿಯೂ ಸಹ ಬೆಂಗಳೂರಿನಲ್ಲಿರುವ ತೋಟದ ಬೆಳೆಗಾರರ ಸಂಘದ ಮತಿಯಿಂದ ಹಣ್ಣು ಮತ್ತು ತರಕಾರಿ ಮಳಿಗೆಗಳನ್ನು ಸ್ಥಾಪಿಸಲು ವಿಚಾರದ ಬಗ್ಗೆ ಸರ್ಕಾರ ಪರಿಶೀಲಿಸುತ್ತಿದೆಯೇ?

ಶ್ರೀ ಎಂ. ಎಸ್. ಆತ್ಮಾನಂದ (ತೋಟಗಾರಿಕೆ ರಾಜ್ಯ ಸಚಿವರು):-

ಅ) ಬೀದರ್ ಜಿಲ್ಲೆಯಲ್ಲಿ ತೋಟಗಾರಿಕೆಯನ್ನು ಅಭಿವೃದ್ಧಿ ಪಡಿಸಲು ಒಟ್ಟು 2 ರಾಜ್ಯ ವಲಯದ ಹಾಗೂ 10 ಜಿಲ್ಲಾ ವಲಯದ ಯೋಜನೆಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ.

ಆ) 1991-92 ನೇ ಸಾಲಿನಲ್ಲಿ ರಾಜ್ಯ ವಲಯದ ಯೋಜನೆಗಳಿಗೆ ರೂ. 37,800-00 ಗಳನ್ನು ಮತ್ತು ಜಿಲ್ಲಾ ವಲಯದ ಯೋಜನೆಗಳಿಗೆ ರೂ. 16,43,000-00 ಗಳನ್ನು ಒದಗಿಸಲಾಗಿದೆ.

ಇ) ಹೌದು. ಬೀದರ್ ಜಿಲ್ಲೆಯಲ್ಲಿ ಮುಂದಿನ ಐದು ವರ್ಷದ ಅವಧಿಯಲ್ಲಿ ಮಾರುಕಟ್ಟೆ ವ್ಯವಸ್ಥೆಯನ್ನು ಅಭಿವೃದ್ಧಿ ಪಡಿಸಲು ರೂ. 92.10 ಲಕ್ಷದ ಕಾರ್ಯಕ್ರಮವನ್ನು ಹಾಕಿಕೊಳ್ಳಲಾಗಿದೆ. ಇದರಲ್ಲಿ 5 ಸಂಗ್ರಹಣಾ ಕೇಂದ್ರಗಳು, 1 ಕೇಂದ್ರಿಯ ಉಗ್ರಾಣ, 10 ಮಾರಾಟ ಮಳಿಗೆಗಳನ್ನು ತೆರೆಯಲು ಹಾಗೂ 8 ಸಾಗಾಣಿಕೆ ವಾಹನಗಳನ್ನು ಖರೀದಿಸಲು ಯೋಜಿಸಲಾಗಿದೆ.

ರಾಜ್ಯದಲ್ಲಿ ಖಾಲಿ ಇರುವ ಗ್ರಾಮ ಲೆಕ್ಕಾಧಿಕಾರಿಗಳ ಸಂಖ್ಯೆ

583 (830) ಶ್ರೀ ಮಂಜುನಾಥ. ಸಿ. ಕುನ್ನೂರು (ಶಿಗ್ಗಾಂವ):- ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಎಷ್ಟು ಗ್ರಾಮಲೆಕ್ಕಿಗಳ ಹುದ್ದೆಗಳು ಖಾಲಿ ಇದೆ;

ಆ) ಧಾರವಾಡ ಜಿಲ್ಲೆಯಲ್ಲಿ ಎಷ್ಟು ಗ್ರಾಮ ಲೆಕ್ಕಿಗರ ಹುದ್ದೆಗಳು ಖಾಲಿಯಿವೆ;

ಇ) ಈ ಬಗ್ಗೆ ಸರ್ಕಾರದವರು ಕೈಗೊಂಡ ಕ್ರಮಗಳೇನು?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಕಂದಾಯ ಸಚಿವರು):-

ಅ) 2034

ಆ) 339

ಇ) ಶ್ರೇಷ್ಠ ನ್ಯಾಯಾಲಯದ ಆದೇಶದ ಪ್ರಕಾರ ಸರ್ಕಾರದ ವಿವಿಧ ಇಲಾಖೆಗಳಲ್ಲಿ ಸಕ್ರಮಗೊಂಡು ಅಂತಹ ಹೆಚ್ಚುವರಿಯಾಗಿರುವ ಅರ್ಹ ದಿನಗೂಲಿ ನೌಕರರನ್ನು ವರ್ಗಾವಣೆ ಮುಖಾಂತರ ಖಾಲಿ ಹುದ್ದೆಗಳನ್ನು ಭರ್ತಿ ಮಾಡಲು ಕ್ರಮ ಕೈಗೊಳ್ಳಲಾಗುತ್ತಿದೆ.